ದಿನಾಂಕ 14-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಶ್ರೀ ಎಂ. ಆರ್ ವಕೀಲರವರಿಂದಃ**

ನಿಮ್ಮ ಪ್ರಕಾರ ಅಪಘಾತವು ಯಾವ ದಿನದಂದು ಆಗಿರುತ್ತದೆ ಎಂದರೆ ದಿಃ 08-11-2023 ರಂದು ಕಲ್ಸಂಕ ಹತ್ತಿರ ಆಗಿರುತ್ತದೆ. ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ನೀವು ಕಾನೂನಿನ ವಿದ್ಯಾರ್ಥಿ ಆಗಿರುತ್ತೀರಾ ಎಂದರೆ ಅಂತಿಮ ವರ್ಷದ ಕಾನೂನು ವಿದ್ಯಾರ್ಥಿಯಾಗಿದ್ದೆನು. ಅಪಘಾತಕ್ಕೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ನಿಮಗೆ ಸಾಮಾನ್ಯ ಜ್ಞಾನ ಇತ್ತು ಎಂದರೆ ಹೌದು. ಅಪಘಾತವಾದ ತಕ್ಷಣ ನೀವು ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಹೌದು. ಸಾಕ್ಷಿಯವರು ಮುಂದುವರಿದು ಅಪಘಾತಪಡಿಸಿದ ವ್ಯಕ್ತಿಯು ಹಿರಿಯ ನಾಗರಿಕನಾಗಿದ್ದು ದೂರು ನೀಡುವುದು ಬೇಡ, ವೈದ್ಯಕೀಯ ವೆಚ್ಚಗಳನ್ನು ನಾನು ಭರಿಸಿಕೊಡುತ್ತೇನೆ ಎಂದು ಹೇಳಿದ್ದರು ಆ ಕಾರಣದಿಂದ ನೀಡಲಿಲ್ಲ.

ಈಗ ನೀವು ಅಪಘಾತಪಡಿಸಿದ ವ್ಯಕ್ತಿಯು ದೂರು ನೀಡುವುದು ಬೇಡ ವೈದ್ಯಕೀಯ ವೆಚ್ಚಗಳನ್ನು ನಾನು ಭರಿಸಿಕೊಡುತ್ತೇನೆ ಎಂದು ಹೇಳಿದ ಕಾರಣ ದೂರು ನೀಡಲಿಲ್ಲ ಎಂದು ಹೇಳಿರುತ್ತೀರಿ ಅದರ ಬಗ್ಗೆ ದಾಖಲೆಗಳು ಇರುವುದಿಲ್ಲ ಎಂದರೆ ಹೌದು. ಅಪಘಾತಕ್ಕೆ ಪೂರ್ವದಲ್ಲಿ ಹಿಂದಿನಿಂದ ಬರುತ್ತಿದ್ದ, ಅಪಘಾತಪಡಿಸಿದೆ ಎನ್ನುವ ವಾಹನವನ್ನು ನೋಡಿರುವುದಿಲ್ಲ ಎಂದರೆ ನಾನು ನೋಡಿರುವುದಿಲ್ಲ. ನೀವು ಚಾಲನೆ ಮಾಡುತ್ತಿದ್ದ ದ್ವಿ ಚಕ್ರ ವಾಹನವು ಯಾರಿಗೆ ಸೇರಿದ್ದು ಎಂದರೆ ನನ್ನ ತಂದೆಯವರಿಗೆ ಸೇರಿದ್ದಾಗಿದೆ. ಅಪಘಾತವಾಗಿದೆ ಎಂದು ಹೇಳುವ ಸಮಯಕ್ಕೆ ಮೊದಲು ನೀವು ಎಷ್ಟು ವರುಷಗಳಿಂದ ದ್ವಿ ಚಕ್ರ ವಾಹನವನ್ನು ಚಾಲನೆ ಮಾಡುತ್ತಿದ್ದೀರಿ ಎಂದರೆ ಸುಮಾರು 20

ವರುಷಗಳಿಂದ ಚಾಲನೆ ಮಾಡುತ್ತಿದ್ದೆನು. ನಿಮ್ಮ ಬಳಿ ಡಿ. ಎಲ್ ಇರುತ್ತದೆಯೇ ಅದನ್ನು ಹಾಜರುಪಡಿಸಬಹುದೇ ಎಂದರೆ ಇರುತ್ತದೆ ಹಾಜರುಪಡಿಸಬಹುದು.

ದ್ವಿಚಕ್ರ ವಾಹನದ ಬಲ ಬದಿಯ ಕನ್ನಡಿಯನ್ನು ಯಾವ ಉದ್ದೇಶಕ್ಕಾಗಿ ಬಳಸುತ್ತಾರೆ ಎಂದು ಹೇಳಬಹುದೇ ಎಂದರೆ ಹಿಂದೆ ಯಾವುದಾದರೂ ವಾಹನಗಳು ಅಥವಾ ಯಾರಾದರೂ ಬರುತ್ತಾರೆಯೇ ಎಂದು ಗಮನಿಸಲು ಬಳಸುತ್ತಾರೆ. ಹಿಂದಿನಿಂದ ಬರುತ್ತಿದ್ದ ವಾಹನಗಳನ್ನು ಗಮನಿಸದೆ, ಹಿಂದಿನಿಂದ ಬರುತ್ತಿದ್ದ ವಾಹನದ ಸಂಚಾರಕ್ಕೆ ನೀವೇ ಅಡ್ಡಿಪಡಿಸಿ ನಿಮ್ಮ ತಪ್ಪಿನಿಂದಲೇ ಅಪಘಾತವನ್ನು ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಅಪಘಾತವು ನಿಮ್ಮ ತಪ್ಪಿನಿಂದಲೇ ಆಗಿರುತ್ತದೆ ಎನ್ನುವ ಅರಿವು ನಿಮಗೆ ಇದ್ದ ಕಾರಣ ಕೂಡಲೇ ದೂರನ್ನು ನೀಡದೆ 26 ದಿನಗಳು ತಡವಾಗಿ ಸುಳ್ಳು ದೂರನ್ನು 2 ನೇ ಎದುರುದಾರರು ವಿಮೆ ನೀಡಿರುವ ವಾಹನದ ವಿರುದ್ಧ ನೀಡಿರುತ್ತೀರಿ ಎಂದರೆ ಸರಿಯಲ್ಲ.

ದಿಃ 08-11-2023 ರಂದು ಅಪಘಾತವಾಗಿದ್ದು ಅದೇ ದಿನ ನೀವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಅದೇ ದಿನ ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತೀರಿ ಎಂದರೆ ಹೌದು. ಸಾಕ್ಷಿಯವರು ಮುಂದುವರಿದು ನನಗೆ ಪಿ ಒ ಪಿ ಯನ್ನು ಹಾಕಿದ್ದರು ಮತ್ತು ಒಂದು ವೇಳೆ ಮೂಳೆ ಸರಿ ಹೋಗದೇ ಇದ್ದಲ್ಲಿ ಶಸ್ತ್ರ ಚಿಕಿತ್ಸೆಯನ್ನು ಮಾಡಬೇಕೆಂದು ತಿಳಿಸಿದರು ಆ ಕಾರಣದಿಂದ ಬಿಡುಗಡೆಯಾಗಿರುತ್ತೇನೆ. ನಂತರ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಿರುತ್ತೇನೆ. ಅಪಘಾತದಿಂದ ಆಗಿದೆ ಎಂದು ಹೇಳುವ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದರೆ ಸರಿಯಲ್ಲ. ನಂತರದ ದಿನಗಳಲ್ಲಿ ನೀವು ಆಸ್ಪತ್ರೆಗೆ ದಾಖಲಾಗಿರುವುದು ಮತ್ತು ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವುದು ಅಪಘಾತದಿಂದ ಆಗಿದೆ ಎಂದು ಹೇಳುವ ಗಾಯಗಳ ಚಿಕಿತ್ಸೆಗೆ ಆಗಿರುವುದಿಲ್ಲ ಎಂದರೆ ಅದು ಸರಿಯಲ್ಲ.

ಪಿ.ಡಬ್ಲ್ಯೂ: 1

ನೀವು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲುಗಳು ಅಪಘಾತದಿಂದ ಆಗಿದೆ ಎಂದು ಹೇಳುವ ಗಾಯಗಳಿಗೆ ಸಂಬಂದಿಸಿದಂತೆ ಪಡೆದ ಚಿಕಿತ್ಸೆಗೆ ಸಂಬಂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ನೀವು ಅಂತಿಮ ವರ್ಷದ ಕಾನೂನು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತೀರಾ ಎಂದರೆ ಹೌದು.

ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 8 ನೇ ಕಂಡಿಕೆಯಲ್ಲಿ ಹೇಳಿರುವಂತಹ ಸಾಧನೆಯ ಬಗ್ಗೆ ದಾಖಲೆಗಳು ಇರುತ್ತದೆಯೇ ಎಂದರೆ ಇರುತ್ತದೆ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 8 ನೇ ಕಂಡಿಕೆಯಲ್ಲಿ ತಿಂಗಳಿಗೆ 30 ಸಾವಿರ ರೂಪಾಯಿಯನ್ನು ಸಂಪಾದನೆ ಮಾಡುತ್ತಿದ್ದೆನು ಎಂದು ಹೇಳಿರುತ್ತೀರಿ ಅದರ ಬಗ್ಗೆ ದಾಖಲೆಗಳು ಇರುತ್ತದೆಯೇ ಎಂದರೆ ಈಗ ಇರುವುದಿಲ್ಲ.

ನಿಮ್ಮ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವೈದ್ಯಕೀಯ ಖರ್ಚು, ಪೌಷ್ಠಿಕ ಆಹಾರಕ್ಕೆ, ಓಡಾಟಕ್ಕೆ, ಪರಿಚಾರಕರಿಗೆ, ಖರ್ಚು ಆಗಿರುವ ಬಗ್ಗೆ ದಾಖಲೆ ಇರುತ್ತದೆಯೇ ಎಂದರೆ ಇರುವುದಿಲ್ಲ. ನಿಪಿ 10 ರಲ್ಲಿ ಕಾಣಿಸಿರುವ ಅಂಗನ್ಯೂನತೆಯ ಪ್ರಮಾಣವು ಅಪಘಾತದಿಂದ ಆಗಿದೆ ಹೇಳುವ ಗಾಯಗಳಿಂದ ಆಗಿರುವಂತಹ ನ್ಯೂನತೆ ಅಲ್ಲ ಎಂದರೆ ಸರಿಯಲ್ಲ. ನಿಮಗೆ ಯಾವುದೇ ರೀತಿಯ ಆರ್ಥಿಕ ನಷ್ಟ ಆಗಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರರು ವಿಮೆ ನೀಡಿರುವ ವಾಹನದ ವಿರುದ್ದ ಸುಳ್ಳು ದೂರನ್ನು ನೀವು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

ನೀವು ಉಡುಪಿಯ ವಕೀಲರ ಸಂಘದಲ್ಲಿ ವಕೀಲರಾಗಿ ನೋಂದಣಿಯಾಗಿ ವಕೀಲರಾಗಿ ಸೇವೆಯನ್ನು ಮಾಡುತ್ತಾ ಇರುತ್ತೀರಿ ಅಲ್ಲವೇ ಎಂದರೆ ಹೌದು. ಯಾವ

ವರುಷದಂದು ಉಡುಪಿಯ ವಕೀಲರ ಸಂಘದಲ್ಲಿ ನೋಂದಣಿ ಮಾಡಿರುತ್ತೀರಿ ಮತ್ತು ಯಾವ ವರುಷದಿಂದ ವಕೀಲರಾಗಿ ಸೇವೆಯನ್ನು ಸಲ್ಲಿಸಿರುತ್ತೀರಿ ಎಂದರೆ 2024 ರಿಂದ. ಅಪಘಾತವು ಸಂಪೂರ್ಣವಾಗಿ ನಿಮ್ಮ ನಿರ್ಲಕ್ಷತನದಿಂದಲೇ ಆಗಿರುವುದರಿಂದ 2 ನೇ ಎದ್ರುದಾರರು ಪರಿಹಾರ ತುಂಬಿಕೊಡಲು ಬಾಧ್ಯಸ್ಥರಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ. ಉಡುಪಿ.